ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 29-10-1970.

*ದೀಪಮಾಲೆಯ ಸತ್ಯ ರಹಸ್ಯ* (दीपमाला का सच्चा रहस्य)

ಇಂದು ಬಾಪ್ ದಾದಾ ದೀಪಮಾಲೆಯನ್ನು ನೋಡುತ್ತಿದ್ದರು. ಇದು ದೀಪಗಳ ಮಾಲೆಯಾಗಿದೆಯಲ್ಲವೇ? ಜನರು ದೀಪಾವಳಿಯನ್ನು ಆಚರಿಸುತ್ತಾರೆ, ದೀಪಮಾಲೆಯನ್ನು ನೋಡುತ್ತಾರೆ. ಎಂತಹ ದೀಪಗಳು ಚೆನ್ನಾಗಿರುತ್ತವೆ? ಅಖಂಡ ಮತ್ತು ಅಟಲವಾಗಿರುವ ದೀಪಗಳು, ಯಾವುದರ ತುಪ್ಪ ಎಂದಿಗೂ ಕಡಿಮೆ ಆಗುವುದಿಲ್ಲವೋ ಅವೇ ಅಖಂಡವಾಗಿ ಉರಿಯುತ್ತವೆ. ತಮ್ಮನ್ನು ಇಂತಹ ದೀಪ ಎಂದು ತಿಳಿಯುತ್ತೀರಾ? ಇಂತಹ ದೀಪಗಳ ಸ್ಮೃತಿಚಿಹ್ನೆ ಮಾಲೆಯಾಗಿದೆ. ತಮ್ಮನ್ನು ಮಾಲೆಯ ಮಧ್ಯ ಹೊಳೆಯುತ್ತಿರುವ ದೀಪವೆಂದು ತಿಳಿಯುತ್ತೀರಾ? ನಮ್ಮ ಸ್ಮೃತಿಚಿಹ್ನೆಯನ್ನು ಇಂದು ಆಚರಿಸಲಾಗುತ್ತಿದೆ ಎಂದು ತಿಳಿಯುತ್ತೀರಾ ದೀಪಾವಳಿಯಂದು ಎರಡು ವಿಶೇಷ ಮಾತುಗಳನ್ನು ಗಮನಿಸಬೇಕು, ಅವು ಯಾವವು? (ಸ್ವಚ್ಛತೆ ಮತ್ತು ಹೊಸ ಖಾತೆಯನ್ನು ತಯಾರು ಮಾಡುತ್ತಾರೆ) ಆದರೆ ಗುರಿ ಏನಿರುತ್ತದೆ? (ಸಂಪಾದನೆ), ಆ ಗುರಿಯನ್ನಿಟ್ಟುಕೊಂಡು ಸ್ವಚ್ಚತೆಯನ್ನು ಮಾಡುತ್ತಾರೆ. ಎಲ್ಲಾ ಪ್ರಕಾರದ ಸ್ವಚ್ಛತೆಯನ್ನೂ ಮಾಡಬೇಕು ಮತ್ತು ಸಂಪಾದನೆಯ ಗುರಿಯನ್ನೂ ಬುದ್ಧಿಯಲ್ಲಿಟ್ಟುಕೊಳ್ಳಬೇಕು. ಈ ಸ್ವಚ್ಚತೆ ಮತ್ತು ಸಂಪಾದನೆಯ ಎರಡೂ ಕಾರ್ಯಗಳನ್ನು ಎಲ್ಲರೂ ಮಾಡಿದ್ದೀರಾ? ತಮ್ಮಿಂದ ತಾವು ಸಂತುಷ್ಟರಾಗಿದ್ದೀರಾ? ಸಂಪಾದನೆ ಇದ್ದಾಗ ಸ್ವಚ್ಚತೆ ಅವಶ್ಯವಾಗಿರುವುದಲ್ಲವೇ? ಈ ಎರಡೂ ಮಾತುಗಳಲ್ಲಿ ಸಂತುಷ್ಟತೆಯಿರುವುದು ಆವಶ್ಯಕ. ಆದರೆ ಸಂತುಷ್ಟತೆ ಸದಾ ದಿವ್ಯಗುಣಗಳ ಆಹ್ವಾನ ಮಾಡುವವರಿಗೆ ಇರುತ್ತದೆ. ಯಾರು ಎಷ್ಟು ಆಹ್ವಾನ ಮಾಡುವರೋ ಅಷ್ಟು ಎರಡರಲ್ಲಿ ಸದಾ ಸಂತುಷ್ಟ ಆಗಿರುವರು. ಎಷ್ಟೆಷ್ಟು ದಿವ್ಯಗುಣಗಳ ಆಹ್ವಾನ ಮಾಡುವಿರೋ ಅಷ್ಟು ಅವಗುಣ ಆಹುತಿ ರೂಪದಲ್ಲಿ ನಾಶವಾಗುವವು. ನಂತರ ಏನಾಗುವುದು? ಹೊಸ ಸಂಸ್ಕಾರಗಳ ಹೊಸ ವಸ್ತ್ರ ಧಾರಣೆ ಮಾಡುವಿರಿ. ಈಗ ಆತ್ಮವು ಹೊಸ ಸಂಸ್ಕಾರ ರೂಪದ ಹೊಸ ವಸ್ತ್ರ ಧಾರಣೆ ಮಾಡಿರುವುದೇ ಅಥವಾ ಒಮ್ಮೊಮ್ಮೆ ಹಳೆಯ ವಸ್ತ್ರಗಳ ಮೇಲೆ ಪ್ರೀತಿಯಿರುವ ಕಾರಣ ಅದನ್ನೂ ಧರಿಸುತ್ತೀರೋ? ಮರಜೀವ ಆದಾಗ, ಹೊಸ ಜನ್ಮ, ಹೊಸ ಸಂಸ್ಕಾರಗಳನ್ನು ಧಾರಣೆ ಮಾಡಿ ನಂತರ ಒಮ್ಮೊಮ್ಮೆ ಹಳೆಯ ಸಂಸ್ಕಾರ ರೂಪಿ ವಸ್ತ್ರಗಳನ್ನು ಏಕೆ ಧಾರಣೆ ಮಾಡುತ್ತೀರಿ? ಹಳೆಯ ವಸ್ತ್ರಗಳು ಅತಿ ಪ್ರಿಯವೇ? ಯಾವ ವಸ್ತು ತಂದೆಗೆ ಪ್ರಿಯವಲ್ಲವೋ ಅದು ಮಕ್ಕಳಿಗೆ ಏಕೆ ಪ್ರಿಯ?

ಇಲ್ಲಿಯವರೆಗಿದ್ದ ದುರ್ಬಲತೆಗಳು, ಕುಂದು-ಕೊರತೆಗಳು, ನಿರ್ಬಲತೆ, ಕೋಮಲತೆಯ ಎಲ್ಲಾ ಹಳೆಯ ಖಾತೆಯನ್ನು ಇಂದು ಸಮಾಪ್ತಿ ಮಾಡಿದರೆ ಇದೇ ದೀಪಾವಳಿಯ ಆಚರಣೆಯಾಗಿದೆ. ಅಲ್ಪಕಾಲಕ್ಕಾಗಿಯಲ್ಲ ಆದರೆ ಸದಾಕಾಲಕ್ಕಾಗಿ ಮತ್ತು ಸರ್ವ ರೂಪಗಳಿಂದ ಸಮಾಪ್ತಿ ಮಾಡುವುದೇ ದೀಪಾವಳಿಯ ಆಚರಣೆ, ದೀಪಾವಳಿಯನ್ನು ಪಟ್ಟಾಭಿಷೇಕದ ದಿನವೆಂದು ಹೇಳುತ್ತಾರೆ. ಇಂದು ತಮ್ಮೆಲ್ಲರ ಯಾವ ಪಟ್ಟಾಭಿಷೇಕ ಆಚರಿಸಲಾಯಿತು? ಪಟ್ಟಾಭಿಷೇಕದ ದಿನದಂದು ಏನು ಮಾಡಲಾಗುತ್ತದೆ? ರಾಜ ಸಿಂಹಾಸನದ ಸಮಾರಂಭವನ್ನು ಎಂದಾದರೂ ನೋಡಿದ್ದೀರಾ? ಸ್ಮೃತಿಯಲ್ಲಿ ಬರುತ್ತದೆಯೇ? ಎಷ್ಟು ಸಾರಿ ನೋಡಿರುವಿರಿ? ಅನೇಕ ಬಾರಿ. ಈ ಜನ್ಮದಲ್ಲಿ ಪ್ರತ್ಯಕ್ಷ ನೋಡಿದ ಮಾತುಗಳು ಸ್ಪಷ್ಟ ರೂಪದಲ್ಲಿ ಪ್ರಕಟವಾಗುವಂತೆ ದಿನದಿನಕ್ಕೆ ಅನುಭವ ಮಾಡುವಿರಿ. ಆತ್ಮನಲ್ಲಿ ಸಮಾವೇಶಗೊಂಡ ಭವಿಷ್ಯ ರಾಜ್ಯದ ಸಂಸ್ಕಾರ ನಿನ್ನೆ ನೋಡಿದ ಮಾತಿನಂತೆ ಅನುಭವ ಮಾಡುವಿರಿ. ಈ ರೀತಿ ಪ್ರತ್ಯಕ್ಷ ರೂಪದಲ್ಲಿ ಅನುಭವ ಮಾಡುವಿರಿ. ಆಗ ನಮ್ಮ ಸಂಪೂರ್ಣ ಸ್ಥಿತಿ ಮತ್ತು ನಮ್ಮ ರಾಜ್ಯದ ಸಮೀಪ ಬಂದಿರುವೆವೆಂದು ತಾವು ಇದರಿಂದ ತಿಳಿದುಕೊಳ್ಳಬೇಕು. ಸತ್ಯಯುಗದ ಸಂಸ್ಕಾರ ಯೋಚಿಸುತ್ತಾ ಅಥವಾ ಸ್ಮೃತಿಯಲ್ಲಿ ತರುವುದರಿಂದ ಅಲ್ಲ ಆದರೆ ಸ್ವತಃ ಮತ್ತು ಸ್ಪಷ್ಟ ರೀತಿ ಜೀವನದಲ್ಲಿ ಬರುತ್ತವೆ. ಈ ಪ್ರಪಂಚದಲ್ಲಿರುತ್ತಾ ಕಣ್ಣುಗಳಿಂದ ಸತ್ಯಯುಗದ ದೃಷ್ಯಗಳು ಕಂಡು ಬರುವವು, ಅಷ್ಟೇ ಅಲ್ಲ ಭವಿಷ್ಯದಲ್ಲಿ ಧಾರಣೆ ಮಾಡಿಕೊಳ್ಳಬೇಕಾದ ಸ್ವರೂಪವೂ ಸಹ ಮತ್ತೆ ಮತ್ತೆ ಸ್ಪಷ್ಟವಾಗಿ ಕಂಡು ಬರುವುದು. ಈಗೀಗ ಇದನ್ನು ಬಿಡುವುದು ಮತ್ತು ಶೃಂಗರಿತವಾದ ವಸ್ತ್ರವನ್ನು ಧಾರಣೆ ಮಾಡುವುದು ಈ ರೀತಿ ಅನುಭವ ಮಾಡುವಿರಿ. ಈ ಸಂಗಮಯುಗದಲ್ಲಿಯೇ ಸತ್ಯಯುಗಿ

ಸ್ವರೂಪದ ಅನುಭವ ಮಾಡುವಿರಿ. ಪುರುಷಾರ್ಥ ಮತ್ತು ಪ್ರಾಲಬ್ಧ ಎರಡೂ ರೂಪಗಳಿಂದ ಪ್ರತಿಯೊಬ್ಬರನ್ನೂ ಪ್ರತ್ಯಕ್ಷ ನೋಡುವಿರಿ. ಆದ್ದರಿಂದ ದೀಪಾವಳಿಯ ಈ ದಿನದಂದು ದಿವ್ಯಗುಣಗಳನ್ನು ಆಹ್ವಾನ ಮಾಡಬೇಕು. ಈಗ ಕಲ್ಪದ ಹಿಂದೆ ಈ ರೀತಿ ಮಾಡಿರಬಹುದು ಎಂದು ಬಾಯಿಂದ ಬರುತ್ತದೆ, ಆದರೆ ನಂತರ ಈ ಶಬ್ದಗಳು ಬದಲಾಗುವವು. ಈ ಕಲ್ಪದ ಮಾತಾಗುವುದು. 5000 ವರ್ಷಗಳ ಮಾತು ನೆನ್ನೆಯ ಮಾತಿನಂತೆ ಸ್ಪಷ್ಟ ಸ್ಮೃತಿಯಲ್ಲಿ ಬರುವುದು. ವಿಜ್ಞಾನದ ಸಾಧನವಾದ ದುರ್ಬೀನಿನಲ್ಲಿ ದೂರದ ವಸ್ತುವೂ ಸಮೀಪ ಮತ್ತು ಸ್ಪಷ್ಟವಾಗಿ ಕಂಡು ಬರುವಂತೆ ತಮ್ಮ ಮೂರನೆಯ ಕಣ್ಣು ಕಲ್ಪದ ಹಿಂದಿನ ಮಾತುಗಳನ್ನು ಸಮೀಪ ಮತ್ತು ಸ್ಪಷ್ಟ ಕಾಣುವುದು ಮತ್ತು ಅನುಭವ ಮಾಡುವವು. ಆದ್ದರಿಂದ ಹಳೆಯ ಸಂಸ್ಕಾರಗಳ ಹೊತ್ತಿಗೆಯನ್ನು (ರಜಿಸ್ಟರ್ ) ಮರೆತೂ ಸಹ ಮತ್ತೆ ನೋಡಬೇಡಿ. ಹಳೆಯ ಸಂಸ್ಕಾರಗಳ ವಸ್ತ್ರ ಮತ್ತೆ ಮತ್ತೆ ಧಾರಣೆ ಮಾಡಬೇಡಿ, ನವೀನತೆಯನ್ನು ಧಾರಣೆ ಮಾಡಿ, ಇದೇ ಇಂದಿನ ದಿನದ ಮಂತ್ರವಾಗಿದೆ. ರತ್ನಜಡಿತ ವಸ್ತ್ರ ಬಿಟ್ಟು ಹಳೆಯ ಶಿಥಿಲವಾದ ವಸ್ತ್ರದ ಜೊತೆಗೆ ಪ್ರೀತಿ ಬೇಡ. ಸದಾ ಬುದ್ಧಿಯಲ್ಲಿ ಬಾಪ್ ದಾದಾರ ಸ್ಮೃತಿ ಮತ್ತು ಗುರಿ ಮತ್ತು ಬರಲಿರುವ ರಾಜ್ಯದ ದೃಶ್ಯಗಳು. ಕಣ್ಣುಗಳಲ್ಲಿ ಮತ್ತು ಬಾಯಲ್ಲಿ ಸದಾ ಬಾಪ್ ದಾದಾರ ಹೆಸರು ಇರಲಿ, ಇವರಿಗೆ ಬಾಪದಾದಾರ ಅತಿ ಸ್ನೇಹಿ ಮತ್ತು ಸಮೀಪ ರತ್ನವೆಂದು ಹೇಳಲಾಗುತ್ತದೆ.

ಎಲ್ಲರೂ ಶ್ರೇಷ್ಠ ಮತ್ತು ಸಮೀಪ ರತ್ನವಾಗುವ ಗುರಿಯಿಟ್ಟುಕೊಂಡಿರುವಿರೋ ಅಥವಾ ಏನು ಸಿಗುತ್ತದೆಯೋ ಅದು ಚೆನ್ನಾಗಿದೆಯೋ? ಈ ಮಾತಿನಲ್ಲಿ ಸಂತುಷ್ಟರಾಗಿದ್ದರೆ ಸಂಪೂರ್ಣರಾಗುವುದಿಲ್ಲ. ಆದ್ದರಿಂದ ಸದಾ ನಾವು ವಿಜಯೀ ಮತ್ತು ಸಂಪೂರ್ಣರಾಗಿ ತೋರಿಸುತ್ತೇವೆ ಎಂಬ ಗುರಿಯಿಟ್ಟುಕೊಳ್ಳಿ, ದುರ್ಬಲತೆಯ ಶಬ್ದಗಳು ಸಮಾಪ್ತಿಯಾದವು. ಮಾಡುವೆವು, ಆಗಿಯೇ ಆಗುತ್ತದೆ, ಪುರುಷಾರ್ಥ ಮಾಡುತ್ತಿದ್ದೇವೆ, ಈ ಶಬ್ದಗಳು ಸಹ ಬರಬಾರದು. ಮಾಡಿಯೇ ತೋರಿಸುತ್ತೇವೆ, ಆಗಿಯೇ ತೋರಿಸುತ್ತೇವೆ ಇವಾಗಿವೆ ನಿಶ್ಚಯಬುದ್ಧಿ ವಿಜಯಿರತ್ನಗಳ ಮಾತು ಮತ್ತು ಅವಾಗಿವೆ ಬಿಲ್ಲು ಧರಿಸಿದ ತ್ರೇತಾಯುಗಿ ಮಕ್ಕಳ ಮಾತು. ಆಗಬೇಕಾಗಿರುವುದು ಸ್ವದರ್ಶನ ಚಕ್ರಧಾರಿ ಆದರೆ ಬಿಲ್ಲುಧಾರಿ ಆಗುತ್ತಾರೆ. ಅದಾದರೂ ಆಗುತ್ತೇವೆಯಲ್ಲ ಎಂದು ಕೆಲವರು ಯೋಚಿಸುತ್ತಾರೆ. ಈ ಮಾತಿನಲ್ಲಿ ದಯಾಳು ಆಗಬಾರದು. ಯಾರಾದರೂ ಆಗುತ್ತಾರೆ ಆದ್ದರಿಂದ ನಾವೇ ಆಗುತ್ತೇವೆ. ಎಂದು ಆಗುವವರು ಬಹಳ ಇದ್ದಾರೆ. ಒಳ್ಳೆಯದು.

ಅವ್ಯಕ್ತ ಮುರಳಿ 29-10-1970.

***ದೀಪಾವಳಿಯ ಸತ್ಯ ರಹಸ್ಯ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ**.

ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಅಖಂಡ ಮತ್ತು ಸ್ಥಿರವಾಗಿರುವ ದೀಪವಾಗಿದ್ದೇನೆ.

2. ನಾನು ಸ್ವಚ್ಛತೆ ಮತ್ತು ಸಂಪಾದನೆ ಎಂಬ ಎರಡು ಕಾರ್ಯಗಳನ್ನು ಮಾಡಿರುವ ಸಂತುಷ್ಟ ಸ್ವರೂಪ.

3. ನಾನು ಸಂಪೂರ್ಣವಾಗಿ ದಿವ್ಯ ಗುಣಗಳನ್ನು ಆಹ್ವಾನಿಸಿ ಅವಗುಣಗಳನ್ನು ಸಮಾಪ್ತಿ ಮಾಡಿದ್ದೇನೆ.

4. ನಾನು ಇಲ್ಲಿಯವರೆಗೆ ಇರುವ ಎಲ್ಲಾ ಹಳೆಯ ಸಂಸ್ಕಾರಗಳನ್ನು ಸದಾ ಕಾಲಕ್ಕಾಗಿ ಸಮಾಪ್ತಿ ಮಾಡಿ ದೀಪಾವಳಿಯನ್ನು ಆಚರಿಸಿಕೊಂಡಿದ್ದೇನೆ.

5. ನಾನು ಈ ಸಂಗಮ ಯುಗದಲ್ಲಿಯೇ ಸತ್ಯಯುಗಿ ಸ್ವರೂಪವನ್ನು ಅನುಭವ ಮಾಡಿಕೊಂಡಿದ್ದೇನೆ.

6. ನಾನು ನನ್ನ ಮೂರನೇ ಕಣ್ಣಿನಿಂದ (ಜ್ಞಾನ ನೇತ್ರ) ಕಲ್ಪಪೂರ್ವದ ವಿಷಯಗಳನ್ನು ಸಮೀಪ ಮತ್ತು ಸ್ಪಷ್ಟವಾಗಿ ನೋಡಿದ್ದೇನೆ ಮತ್ತು ಅನುಭವ ಮಾಡಿದ್ದೇನೆ.

7. ನಾನು ಸದಾ ಬುದ್ಧಿಯಲ್ಲಿ ಬಾಪ್ ದಾದಾರವರ ಸ್ಮೃತಿ, ಗುರಿ, ನಯನಗಳಲ್ಲಿ ಬರಲಿರುವ ರಾಜ್ಯದ ದೃಶ್ಯಗಳನ್ನು, ವಾಣಿಯಲ್ಲಿ ಬಾಪ್ ದಾದಾರವರ ಹೆಸರು ಇರುವ ಸ್ನೇಹಿ ಮತ್ತು ಸಮೀಪ ರತ್ನವಾಗಿದ್ದೇನೆ.

8. ನಾನು ಸಂಪೂರ್ಣವಾಗಿಯೇ ತೋರಿಸುತ್ತೇನೆ ಎಂಬ ಗುರಿಯನ್ನು ಇಟ್ಟುಕೊಂಡಿರುವ ನಿಶ್ಚಯ ಬುದ್ಧಿ ವಿಜಯೀ ರತ್ನ.